ಅಸಲು ದಾವೆ ಸಂ. 428/2013-ಪಿಡಬ್ಲೂ.1

ದಿನಾಂಕ 19-09-2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ಪ್ರತಿವಾದಿ ಪರವಾಗಿ ಶ್ರೀ ಆರ್.ಡಿ.ಪಿ. ವಕೀಲರಿಂದಃ

ಸಮಯ 12-30 ಗಂಟೆಗೆ ಪ್ರಕರಣವನ್ನು ಕೂಗಿ ಕರೆಯಿಸಲಾಯಿತು. ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ 1-00 ಗಂಟೆಗೆ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.

ಪ್ರಕರಣವನ್ನು 1-30 ಗಂಟೆಗೆ ಕೂಗಿ ಕರೆಯಿಸಲಾಯಿತು.

ಪಾಟೀ ಸವಾಲುಃ-ಪ್ರತಿವಾದಿ ಪರವಾಗಿ ಶ್ರೀ ಆರ್.ಡಿ.ಪಿ. ವಕೀಲರಿಂದಃ

1. ಸುಶೀಲಾ ಮಹಾದೇವ ಮಾಲಗಾರ ರವರು ಯಾವಾಗ, ಯಾರ ಮೇಲೆ ಮತ್ತು ಏಕೆ ದಾವೆ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ಯಾರು ಯಾರಿ ಮೇಲೆ ಹಾಗೂ ಏಕೆ ದಾವೆ ಸಲ್ಲಿಸಿರುತ್ತಾರೆ ಎಂಬುದಕ್ಕೆ ಮಾಹಿತಿ ಕೊಟ್ಟಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಕಾಗದ ಪತ್ರಗಳನ್ನು ಕೊಟ್ಟಿರುತ್ತೇನೆಂದು ನುಡಿಯುತ್ತಾರೆ ಸಾಕ್ಷಿಗೆ ಯಾವ ಕಾಗದ ಪತ್ರ ಕೊಟ್ಟಿದ್ದೀರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಮೃತ್ಯು ಪತ್ರ ಕೊಟ್ಟಿದ್ದೇನೆಂದು ನುಡಿದು ಸದರಿ ಕಾಗದ ಪತ್ರವನ್ನು ಬಿಟ್ಟು ಬೇರೆ ಯಾವುದೇ ಕಾಗದ ಪತ್ರವನ್ನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ ಸುಶೀಲಾರವರು ಸಲ್ಲಿಸಿದ ದಾವೆ ಏನು ಆಯಿತು ಎಂದು ನನಗೆ ಗೊತ್ತಿಲ್ಲ.

2. ಸುಶೀಲಾರವರು ಸಲ್ಲಿಸಿದ ಮೇಲ್ಮನವಿ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸುಶೀಲಾರವರಿಗೆ ಮೂರು ಜನ ಮಕ್ಕಳು. ಅವರಲ್ಲಿ ಒಬ್ಬ ರಾಮಾ ಮಹಾದೇವ ಮಾಲಗಾರರವರು ಮೃತರಾಗಿರುತ್ತಾರೆ. ಒಬ್ಬ ಮಗ ಲಕ್ಷ್ಮಣ ಊರು ಬಿಟ್ಟು ಹೋಗಿರುತ್ತಾನೆ. ಇನ್ನೊಬ್ಬ ಮಗಳು ಊರಿನಲ್ಲೆ ವಾಸವಿರುತ್ತಾಳೆ. ದಾವೆ ಹಾಕುವ ಮೊದಲು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಕಾಗದ ಪತ್ರಗಳ ಆಧಾರದ ಮೇಲೆ ಲಕ್ಷ್ಮಣ ಇತನು ಎಲ್ಲಿ ಹೋಗಿರುತ್ತಾನೆ ಎಂದು ಚೌಕಾಸಿ ಮಾಡಿರುವುದಿಲ್ಲ. ಎಷ್ಟು ವರ್ಷಗಳ ಹಿಂದೆ ಲಕ್ಷ್ಮಣ ಇತನು ಊರು ಬಿಟ್ಟು ಹೋಗಿರುತ್ತಾನೆಂದು ನನಗೆ ಗೊತ್ತಿಲ್ಲ.

3. ತಾರಾಬಾಯಿ, ಮಗ, ಗಂಡ ಇವರುಗಳು ಹೊಲದಲ್ಲಿ ಕಟ್ಟಿಸಿದ ಮನೆಯಲ್ಲಿ ವಾಸವಿರುತ್ತಾರೆಂದರೆ ಸಾಕ್ಷಿ ಈಗ ವಾಸವಿರುತ್ತಾರೆಂದು ನುಡಿಯುತ್ತಾರೆ. ಲಕ್ಷ್ಮಣ ಇತನು 20 ವರ್ಷಗಳಿಂದ ಊರು ಬಿಟ್ಟು

ಹೋಗಿರುತ್ತಾನೆಂದರೆ ಸರಿ. ಊರು ಬಿಟ್ಟು ಹೋಗುವ ಮೊದಲು ತನ್ನ ಪಾಲಿನ ಆಸ್ತಿಯನ್ನು ತಾರಾಬಾಯಿಯ ಗಂಡನ ಹೆಸರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖರೀದಿ ಆದ ನಂತರಿದಿಂದ ತಾರಾಬಾಯಿರವರ ಗಂಡನೆ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆಂದರೆ ಸರಿಯಲ್ಲ. ದಾವಾ ಹೂಡುವ ಸಂದರ್ಭದಲ್ಲಿ ಲಕ್ಷ್ಮಣ ಇತನು ದಾವಾ ಆಸ್ತಿಯಲ್ಲಿ 1/3 ಖರೀದಿ ಕೊಟ್ಟ ಬಗ್ಗೆ ಚೌಕಾಸಿ ಮಾಡಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯವರ ಮೇಲೆ ನನ್ನದು ಯಾವುದೇ ರೀತಿಯ ಕ್ಲೇಮ ಇರುವುದಿಲ್ಲ. 2 ನೇ ಪ್ರತಿವಾದಿ ಇತನ ವಿರುದ್ಧವಾಗಿ ಹೊಲದ ಸಲುವಾಗಿ ದಾವೆ ಸಲ್ಲಿಸಿರುತ್ತೇನೆ. ಮುದುಕಿ ಹಿಸ್ಸೆ ಸಲುವಾಗಿ ದಾವೆ ಸಲ್ಲಿಸಿರುತ್ತೇನೆ ಯಾವ ಸರ್ವೇ ನಂಬರ ಎಂದು ನನಗೆ ಹೇಳಲು ಬರುವುದಿಲ್ಲ.

4. 2 ನೇ ಪ್ರತಿವಾದಿ ಮುದುಕಿಯನ್ನು ನೋಡಿಲ್ಲ ಎನ್ನುವ ಕಾರಣಕ್ಕೆ ಆತನ ಮೇಲೆ ದಾವೆ ಸಲ್ಲಿಸಿರುತ್ತೇನೆ. 2 ನೇ ಪ್ರತಿವಾದಿ ಸುಶೀಲಾರವರನ್ನು ನೋಡಿಕೊಳ್ಳದ ಕಾರಣಕ್ಕಾಗಿ ಅವರ ವಿರುದ್ಧ ದಾವೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸುಶೀಲಾರವರ ಮಗಳು ತಾರಬಾಯಿ ಸುಶೀಲಾರವರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಹೊಲದ ಮನೆಯಲ್ಲಿ ಸುಶೀಲಾ ಹಾಗೂ ತಾರಾಬಾಯಿ ಇಬ್ಬರು ಕೂಡಿಯೇ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾನು ಇದ್ದೇ ಎಂದು ನುಡಿಯುತ್ತಾರೆ. ನಾನು ಮನೆಯಲ್ಲಿ ಇದ್ದೇ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಗಂಡನ ಮನೆಯಲ್ಲಿ ವಾಸವಿದ್ದು ಅಲ್ಲಿ ಸರಿಯಿಲ್ಲ ಎಂದು ತವರು ಮನೆಯಲ್ಲಿ ಇರುತ್ತೇನೆಂದರೆ ಸರಿಯಲ್ಲ. ನಾನು ಹಿರೇಕೊಡಿಯಲ್ಲಿ ವಾಸವಿರುತ್ತೇನೆಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಹಿರೇಕೊಡಿಯಲ್ಲಿ ವಾಸವಿಲ್ಲದ ಕಾರಣ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

5. ನನಗೂ ಹಾಗೂ ಸುಶೀಲಾರವರ ಕುಟುಂಬಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ ಎಂದರೆ ಸರಿ. ಸುಶೀಲಾರವರು ಮಾಲಗಾರ ಸಮುದಾಯಕ್ಕೆ ಸೇರಿದವರು. ನಾವು ಕೊರವ ಜಾತಿಗೆ ಸೇರಿದವರು. ನಮ್ಮಲ್ಲಿ ಸದರಿ ಮಾಲಗಾರ ಸಮುದಾಯಕ್ಕೆ ಹೆಣ್ಣು ಕೊಡುವ ಹಾಗೂ ತೆಗೆದುಕೊಳ್ಳುವ ಸಂಬಂಧ ಇರುವುದಿಲ್ಲ ಎಂದರೆ ಸರಿ. ನಾನು ಸುಶೀಲಾರವರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದೆ. ನಾನು ಕೆಲಸಕ್ಕೆ ಹೋಗುವ ಸಮಯದಲ್ಲಿ ಸುಶೀಲಾರವರ ಮಗ ತೀರಿಕೊಂಡಿದ್ದು ಇನ್ನೊಬ್ಬ ಮಗ ಊರು ಬಿಟ್ಟು ಹೋದ ಬಗ್ಗೆ ಮಾಹಿತಿ ಇತ್ತು. ಲಕ್ಷ್ಮಣ ಹಾಗೂ ಸುಶೀಲಾರವರ ನಡುವೆ ಹೊಲದ ಸಲುವಾಗಿ ಜಗಳವಿತ್ತು ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸದರಿರವರುಗಳ ನಡುವೆ ವ್ಯಾಜ್ಯವಿದ್ದ ಬಗ್ಗೆ ನನಗೆ ಮಾಹಿತಿ ಇತ್ತು. ಸದರಿಯವರಿಗೆ ನಾನು ಜಗಳ ಮಾಡಬೇಡಿರಿ ಅಂತಾ ಹೇಳಿರುತ್ತೇನೆ. ನನ್ನಂತೆ ಬೇರೆಯವರೂ ಬುದ್ಧಿವಾದ ಹೇಳಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.
ನಾನು 30 ವರ್ಷಗಳಿಂದ ಸುಶೀಲಾರವರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದೆ. ಹೊಲದಲ್ಲಿ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಬೇರೆಯವರ ಜಮೀನಿಗೂ ಸಹ ನಾನು ಕೆಲಸ ಮಾಡಲು ಹೋಗುತ್ತಿದ್ದೆನು.

6. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ತಾರಾಬಾಯಿ, ರಾಮಚಂದ್ರ, ಸುಶೀಲಾ ಹಾಗೂ ಲಕ್ಷ್ಮಣ

ಇವರುಗಳ ನಡುವೆ ಯಾವ ವ್ಯವಹಾರ ಇತ್ತು ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸುಶೀಲಾರವರು ಅರ್ಧ ದಾವಾ ಆಸ್ತಿಯನ್ನು ರಾಮಚಂದ್ರ ಗುರುವನ್ನನವರ ಹೆಸರಿನಲ್ಲಿ ಮಾಡಿದ್ದರು. ಅರ್ಧ ದಾವಾ ಆಸ್ತಿ ಸುಶೀಲಾರವರ ಹೆಸರಿನಲ್ಲಿ ಇತ್ತು. ಸುಶೀಲಾರವರ ಹೆಸರಿನಲ್ಲಿದ್ದ ಆಸ್ತಿ ಸಲುವಾಗಿ ದಾವೆ ಇತ್ತು ಎಂದರೆ ಸರಿ.

ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

(ಮಂಜುಳ ಬಿ.)
1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ.ಗಳ ನ್ಯಾಯಾಲಯ, ಚಿಕ್ಕೋಡಿ.